ದೂರದಲ್ಲಿ ಪರಿಷ್ಕರಣೆಗೊಂಡು ಮತ್ತೆ ಅಲ್ಲಿಗೆ ವಾಪಸ್ಸಾಗುವುದರ ಔಚಿತ್ಯವನ್ನು ಅವರು ಪ್ರಶ್ನಿಸಿದ್ದರು. 2015ರಲ್ಲಿ ಗಾಂಧಿವಾದಿ ಇಳಾ ಭಟ್ ತಮ್ಮ 'ಅನುಬಂಧ್' ಪುಸ್ತಕದಲ್ಲಿ ನೂರು ಮೈಲಿ ಸಮುದಾಯಗಳನ್ನು ಕಟ್ಟುವ ಮಾತಾಡಿದ್ದರು. ನಮ್ಮ ದೈನಂದಿನ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ ಮತ್ತು ದೈನಂದಿನ ಸೇವೆಗಳಾದ ವಿದ್ಯೆ, ಆರೋಗ್ಯ ಮತ್ತು ಆರ್ಥಿಕ ಸೇವೆಗಳನ್ನು ಒದಗಿಸಿಕೊಡುತ್ತಿರುವವರು ಯಾರು ಎನ್ನುವ ಪ್ರಶ್ನೆಯನ್ನು ಹಿಡಿದು ಆಕೆ ಮಾಡಿದ ಅಧ್ಯಯನ ಮತ್ತು ಅದಕ್ಕೆ ಪರಿಹಾರವಾಗಿ ಇರುವ ಪರ್ಯಾಯ ವ್ಯವಸ್ಥೆಗಳನ್ನು ಆಕೆ ವಿವರಿಸಿದ್ದರು. ಇಳಾ ಅವರು ಆಧುನಿಕ ಜಗತ್ತಿನಲ್ಲಿ ಪರಿಭಾಷಿಸಿದ ಸ್ಥಳೀಯತೆ ನೂರು ಮೈಲಿಗಳ ಪರಿಧಿಯಲ್ಲಿತ್ತು. ಆಧುನಿಕ ವ್ಯವಸ್ಥೆಯ ಜನಸಾಂದ್ರತೆ ಮತ್ತು ವಿಕೇಂದ್ರೀಕೃತ ನಗರೀಕರಣವನ್ನು (ಮಹಾನಗರಗಳನ್ನು ಬಿಟ್ಟು) ಪರಿಗಣಿಸಿದಾಗ, ಈ ವ್ಯವಸ್ಥೆಯಲ್ಲಿ ವ್ಯಾವಹಾರಿಕತೆ ಹಾಗೂ ನೈತಿಕತೆ ಎರಡೂ ಕಾಣುತ್ತವೆ.

ಉದಾಹರಣೆಗೆ, ಒಂದು ಗ್ರಾಮದಲ್ಲಿ ಉತ್ಪಾದನೆಯಾಗುವ ಹಾಲನ್ನು ಮೊದಲಿಗೆ ಗ್ರಾಮಸ್ಥರ ಅವಶ್ಯಕತೆಗಳಿಗೆ ಸ್ಥಳೀಯವಾಗಿ ಮಾರಾಟ ಮಾಡಿ, ಉಳಿದ ಹೆಚ್ಚುವರಿ ಹಾಲನ್ನು ನಗರಕ್ಕೆ ಕಳುಹಿಸುವುದು ಸ್ಥಳೀಯತೆಯ ಪ್ರತೀಕ. ಆದರೆ ಆಧುನಿಕತೆಯ ಯಂತ್ರೀಕರಣದ ಈ ಯುಗದಲ್ಲಿ ಗ್ರಾಮದ ಹಾಲನ್ನು ಸಂಗ್ರಹಿಸುವ ಪ್ರಕ್ರಿಯೆಯಲ್ಲಿಯೇ ಸ್ಥಳೀಯತೆಯ ನಿರಾಕರಣೆಯಿದೆ. ಗುಜರಾತಿನ ಅನೇಕ ಭಾಗಗಳಲ್ಲಿ ರೈತರು ಸಹಕಾರ ಸಂಘಕ್ಕೆ ಸುರಿವ ಹಾಲು ಆಧುನಿಕ ಶೀತಲೀಕರಣದ ಯಂತ್ರಕ್ಕೆ ನೇರವಾಗಿ ಹೋಗುತ್ತದೆ. ಅಲ್ಲಿಂದ ಹಾಲು ತೆಗೆದು ಸ್ಥಳೀಯವಾಗಿ ಮಾರಾಟ ಮಾಡಲು ಸಾಧ್ಯವಿಲ್ಲ. ಶೀತಲೀಕರಣ ಯಂತ್ರದಿಂದ ನೇರವಾಗಿ ಶೀತಲೀಕೃತ ಟ್ಯಾಂಕರುಗಳು ಅದನ್ನು ಹೀರಿ ಕೇಂದ್ರೀಕೃತ ವ್ಯವಸ್ಥೆಗೆ ಪೂರೈಸುತ್ತವೆ. ಅಲ್ಲಿ ಹಾಲನ್ನು ಪ್ಯಾಶ್ಚರೀಕರಿಸಿ ಕೊಬ್ಬನ್ನು ತೆಗೆದು, ಯಂತ್ರಗಳ ಮೂಲಕ ಪ್ಯಾಕೆಟ್ಟುಗಳಲ್ಲಿ ತುಂಬಿಸಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತದೆ. ಆ ಹಾಲನ್ನು, ಬೆಣ್ಣೆ-ತುಪ್ಪವನ್ನು, ಮಜ್ಜಿಗೆಯನ್ನು, ಅದೇ ಗ್ರಾಮದವರು ಗ್ರಾಹಕರಾಗಿ ಕೊಳ್ಳುತ್ತಾರೆ. ಈ ಪ್ರಕ್ರಿಯೆಯಲ್ಲಿ ಸ್ಥಳೀಯ ಉತ್ಪಾದಕರಿಗೆ ದಕ್ಕುವ ಬೆಲೆ ಮತ್ತು ಸ್ಥಳೀಯ ಗ್ರಾಹಕರು ತೆರುವ ಬೆಲೆಯಲ್ಲಿರುವ ಅಂತರವು ಹೂಡಿಕೆಯನ್ನಿಟ್ಟ ಹೊರಗಿನವರು ಲಾಭವಾಗಿ ಆರ್ಜಿಸುತ್ತಾರೆ. ಸ್ಥಳೀಯವಾಗಿ ಹಾಲನ್ನು ಮಾರಾಟಮಾಡಬಹುದಾದರೂ ಹಾಲನ್ನು ಸಂಗ್ರಹಿಸುವ ಆಧುನಿಕ 'ಶುದ್ಧ ಹಾಲಿನ' ತಂತ್ರಜ್ಞಾನ, ಅದಕ್ಕೆ ಎಡೆ ಮಾಡಿಕೊಡುವುದಿಲ್ಲ. ಕೇಂದ್ರೀಕೃತ ವ್ಯವಸ್ಥೆಯ ವ್ಯಸನವಿದು. ಇದು ಸ್ಥಳೀಯತೆಗೂ ವಿರುದ್ಧವಾಗಿದ್ದು, ಪರಿಸರ ವಿರೋಧಿಯೂ ಆಗಿದೆ.

ಸ್ಥಳೀಯ ಅರ್ಥವ್ಯವಸ್ಥೆಯನ್ನು ಕಟ್ಟುವುದಕ್ಕೆ ಸರಿಯಾದವ್ಯವಸ್ಥೆಏನೆಂದುನಾವುಗಳುಕೇಳಿಕೊಂಡಾಗ ನಮಗೆ ಸಿಗುವುದು ಸಮುದಾಯಗಳನ್ನು ಒಳಗೊಳ್ಳುವ ವ್ಯಾಪಾರ ವ್ಯವಸ್ಥೆ. ಇಳಾ ಅವರ ಪುಸ್ತಕದಲ್ಲಿ ಅವರ ಹೆಚ್ಚಿನಂಶ ಉದಾಹರಣೆಗಳು ಸಹಕಾರ ಮತ್ತು ಸಮುದಾಯ ಕೇಂದ್ರಿತ ವ್ಯವಸ್ಥೆಗಳಾಗಿವೆ. ಸುಮನಸ್ ಕೂಡಾ ಸ್ಥಳೀಯ ಸಮುದಾಯಗಳನ್ನೊಳಗೊಂಡ, ಸಂಪತ್ತಿನ ಧ್ರುವೀಕರಣಕ್ಕೆ ವಿರುದ್ಧವಾದ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಾರೆ. ಸಂಪತ್ತಿನ ಧ್ರುವೀಕರಣವಿಲ್ಲದ ವ್ಯವಸ್ಥೆಯನ್ನು ರೂಪಿಸುವ ಒಂದು ಬಗೆ ಎಂದರೆ – ಅತ್ಯಂತ ಹೆಚ್ಚು ಆರ್ಜಿಸುವ ಕ್ರಿಯಾಶೀಲ ವ್ಯಕ್ತಿಗೂ ಮತ್ತು ಕೆಳಸ್ತರದ ನೌಕರರಿಗೂ ಇರುವ ಸಂಬಳ-ಲಾಭದ ಭಾಗ ಮೂರು ಪಟ್ಟಿಗಿಂತ ಹೆಚ್ಚಿರಬಾರದು ಎನ್ನುವ ಸರಳ ಸೂತ್ರದಲ್ಲಿ ಅಡಕವಾಗಿದೆ.

'ಆಧುನಿಕ ಅರ್ಥಶಾಸ್ತ್ರ' ಸಂಪತ್ತನ್ನು ಕೆಲವರು ಆರ್ಜಿಸಿ, ನಂತರ ತೆರಿಗೆ ಮತ್ತು ಫಿಲಾಂತ್ರಫಿಯ ಮೂಲಕ ಮರುವಿಂಗಡಣೆ ಮಾಡುವ ಮಾತಾಡಿದರೆ, 'ನೈತಿಕ ಅರ್ಥಶಾಸ್ತ್ರ' ಮರುವಿಂಗಡಣೆಗೆ ಒಂದು ಪ್ರಮೇಯವನ್ನು ಒದಗಿಸದೇ ಸಂಪತ್ತಿನ ಕೇಂದ್ರೀಕರಣದ ವಿರುದ್ಧ ನಿಲ್ಲುತ್ತದೆ. ಸ್ಥಳೀಯ ಅರ್ಥವ್ಯವಸ್ಥೆಗೂ, ಸಮುದಾಯ ಕೇಂದ್ರಿತ ವ್ಯಾಪಾರ ವ್ಯವಸ್ಥೆಗೂ ಇರುವ ನಂಟು ನಮಗೆ- ಸಮನಸ್ ಮತ್ತು ಇಳಾ- ಇಬ್ಬರ ಪುಸ್ತಕಗಳಲ್ಲೂ ಕಾಣಿಸುತ್ತದೆ.

ಈ ಸ್ಥಳೀಯತೆಯ ಕಥೆಯಲ್ಲಿ ಖಾದಿ ಪ್ರಮುಖವಾದ ಸ್ಥಾನವನ್ನು ಯಾಕೆ ಪಡೆಯುತ್ತದೆ? ಗಾಂಧಿ ಮತ್ತು ಕುಮಾರಪ್ಪನವರ ಅರ್ಥ ವ್ಯವಸ್ಥೆಯಲ್ಲಿ ಖಾದಿಯ ಪಾತ್ರ ಯಾಕೆ ಅಷ್ಟು ಮಹತ್ವದ್ದಾಗಿತ್ತು? ಇದರ ಉತ್ತರ ಕೈಮಗ್ಗ ಮತ್ತು ಖಾದಿಯಲ್ಲಿರುವ ವ್ಯತ್ಯಾಸದಲ್ಲಿದೆ. ಕೇಂದ್ರೀಕೃತ ಆಧುನಿಕ ಬಟ್ಟೆ ಮಿಲ್ಲುಗಳಲ್ಲಿ ತಯಾರಾಗುವ ವಸ್ತ್ರಗಳಿಗೆ